**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಬಿಟಿಇ/11/ಇಸಿಎಸ್(2)/2019-20

ಆಯುಕ್ತರವರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-01
ದೂ.ಸಂ: 080-22200777
E-mail:dte.commissioner@gmail.com
ದಿನಾಂಕ: 21.09.2020.

**ಜ್ಞಾಪನ**

ವಿಷಯ : 2020 ರ ಸೆಪ್ಟೆಂಬರ್ ಡಿಪ್ಲೊಮಾ ಸೆಮಿಸ್ಟರ್ ಥಿಯರಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯಕ್ಕೆ Scheme of Valuation & Model Answer ಗಳನ್ನು ಪರಿಶೀಲಿಸಿ ದೃಢೀಕರಿಸುವ ಕುರಿತು.

ಉಲ್ಲೇಖ:
1. ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ/18/ಇಸಿಎಸ್(3)/2020, ದಿನಾಂಕ: 25.06.2020.
2. ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ/11/ಇಸಿಎಸ್(2)/2020, ದಿನಾಂಕ: 11.09.2020.

*-*-*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಪರೀಕ್ಷಾ ಮಂಡಳಿಯ 2020 ರ ಸೆಪ್ಟೆಂಬರ್ ಡಿಪ್ಲೊಮಾ ಸೆಮಿಸ್ಟರ್ ಥಿಯರಿ ಪರೀಕ್ಷೆಗಳನ್ನು ದಿನಾಂಕ: 07.09.2020 ರಿಂದ 29.09.2020 ರವರೆಗೆ ನಡೆಸಲಾಗುತ್ತಿದೆ. ಉಲ್ಲೇಖ(1) ರ ಈ ಕಛೇರಿ ಸುತ್ತೋಲೆಯನ್ವಯ COVID-19 ಹಿನ್ನೆಲೆಯಲ್ಲಿ ಕೊರೋನಾ ವೈರಸ್ ನಿಯಂತ್ರಣ ಮತ್ತು ಹರಡುವಿಕೆಯನ್ನು ತಡೆಗಟ್ಟುವಿಕೆ ಹಾಗೂ ಮೌಲ್ಯಮಾಪನ ಕೇಂದ್ರದಲ್ಲಿ ಎಲ್ಲಾ ಅಧಿಕಾರಿಗಳು/ಮೌಲ್ಯಮಾಪಕರು/ಸಿಬ್ಬಂದಿಯವರ ಆರೋಗ್ಯದ ಹಿತದೃಷ್ಟಿಯಿಂದ ರಾಜ್ಯದ ವಿವಿಧ 15 ನೋಡಲ್ ಕೇಂದ್ರಗಳ ಪಾಲಿಟೆಕ್ನಿಕ್‌ಗಳಲ್ಲಿ ಉತ್ತರ ಪತ್ರಿಕೆಗಳ ಕೋಡಿಂಗ್ ಮತ್ತು ಮೌಲ್ಯಮಾಪನ ಕಾರ್ಯ ನಡೆಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ.

2020 ರ ಸಪ್ಟೆಂಬರ್ ಸೆಮಿಸ್ಟರ್ ಪರೀಕ್ಷೆಯಲ್ಲಿ ಆಯ್ಕೆಯಾಗಿ ಮುದ್ರಣವಾದ ಪ್ರಶ್ನೆಪತ್ರಿಕೆಗಳ ರಚನಾಕಾರರ ವಿವರಗಳನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರತಿದಿನ ಪ್ರಕಟಿಸಲಾಗುತ್ತಿದೆ. ಅಂತೆಯೇ, ಸದರಿ ವಿವರಗಳನ್ನು ಸಂಬಂಧಪಟ್ಟ ವಿಷಯ ಸಮಿತಿಗಳ ಅಧ್ಯಕ್ಷರು/ಸದಸ್ಯರುಗಳಿಗೆ E-mail ಮೂಲಕ ಕಳುಹಿಸಲಾಗುತ್ತಿದೆ.

ಸಂಬಂಧಪಟ್ಟ ವಿಷಯ ಸಮಿತಿಯ ಅಧ್ಯಕ್ಷರು/ಸದಸ್ಯರು ತಮ್ಮ ವಿಷಯಗಳಿಗೆ ಸಂಬಂಧಿಸಿದ ಪ್ರಶ್ನೆಪತ್ರಿಕೆಗಳ ರಚನಾಕಾರರನ್ನು ಸಂಪರ್ಕಿಸಿ, ಅವರಿಂದ Scheme of Valuation & Model Answer ಗಳನ್ನು E-mail ಮೂಲಕ ತರಿಸಿಕೊಳ್ಳಲು ಕ್ರಮ ವಹಿಸುವಂತೆ ಸೂಚಿಸಲಾಗಿದೆ.

COVID-19 Pandemic ಹಿನ್ನೆಲೆಯಲ್ಲಿ ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಸಂಬಂಧಪಟ್ಟ ವಿಷಯ ಸಮಿತಿಗಳ ಅಧ್ಯಕ್ಷರು/ಸದಸ್ಯರುಗಳ E-mail ಗಳಿಗೆ ರವಾನಿಸಲಾಗುವ Scheme of Valuation & Model Answer ಗಳನ್ನು ತಮ್ಮ ಕೇಂದ್ರಸ್ಥಾನ/Work From Home ನಲ್ಲಿ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಪರಿಶೀಲಿಸಿ ದೃಢೀಕರಿಸಲು ಸೂಚಿಸಲಾಗಿದೆ.

1. ಸ್ಕೀಂ ಆಫ್ ವ್ಯಾಲ್ಯುಯೇಷನ್ ಮತ್ತು ಮಾದರಿ ಉತ್ತರಗಳನ್ನು ಪ್ರಶ್ನೆ ಪತ್ರಿಕೆಯ ರಚನಕಾರರೇ ಸಿದ್ಧಪಡಿಸಿ ಮಾದರಿ ಉತ್ತರಗಳನ್ನು ನಿಗದಿತ ಪಠ್ಯ ಪುಸ್ತಕಗಳಿಂದಲೇ ಸಿದ್ಧಪಡಿಸಿರುವುದನ್ನು ಮತ್ತು ರಚನಾಕಾರರು ದೃಢೀಕರಿಸಿರುವುದನ್ನು ಖಾತರಿ ಪಡಿಸಿಕೊಂಡು ಪರಿಶೀಲಿಸಿ ಮೇಲು ಸಹಿ ಮಾಡುವುದು, ಇಲ್ಲವಾದಲ್ಲಿ ಅಂತಹವುಗಳನ್ನು ಪಟ್ಟಿ ಮಾಡಿ ಕಾರ್ಯದರ್ಶಿಯವರಿಗೆ ಸಲ್ಲಿಸುವುದು.

2. ಸ್ಕೀಂ ಆಫ್ ವ್ಯಾಲ್ಯುಯೇಷನ್ ಮತ್ತು ಮಾದರಿ ಉತ್ತರಗಳಲ್ಲಿ ಯಾವುದೇ ತಪ್ಪುಉತ್ತರಗಳು, ದೋಷಪೂರಿತ ಉತ್ತರಗಳು, ಅಸ್ಪಷ್ಟತೆ ಮತ್ತು ಗೊಂದಲ ಇರದಂತೆ ಪರಿಶೀಲಿಸಿ ದೃಢೀಕರಿಸಲು ತಿಳಿಸಲಾಗಿದೆ.
3. ಪ್ರಶ್ನೆಪತ್ರಿಕೆ ರಚನಾಕಾರರು ನೀಡಿರುವ ಸ್ಕೀಂ ಆಫ್ ವ್ಯಾಲ್ಯುಯೇಷನ್ ಮತ್ತು ಮಾದರಿ ಉತ್ತರಗಳನ್ನು ವಿವಿಧ ಮೌಲ್ಯಮಾಪನ ಕೇಂದ್ರಗಳಲ್ಲಿ ಎಲ್ಲಾ ಮೌಲ್ಯಮಾಪಕರು ಒಂದೇ ರೀತಿಯಲ್ಲಿ ಅರ್ಥೈಸಿ ನಿಖರವಾಗಿ ಅಂಕಗಳನ್ನು ನೀಡಲು ಅನುವಾಗುವಂತೆ ಅತ್ಯಂತ ಜಾಗ್ರತೆಯಿಂದ ಅಂಕಗಳನ್ನು ವಿಂಗಡಿಸಿರುವುದನ್ನು ಪರಿಶೀಲಿಸುವುದು. ಸ್ಕೀಂ ಆಫ್ ವ್ಯಾಲ್ಯುಯೇಷನ್ ಮತ್ತು ಮಾದರಿ ಉತ್ತರಗಳಲ್ಲಿ ಯಾವುದೇ ರೀತಿಯ ತಪ್ಪುಗಳು ಕಂಡುಬಂದಲ್ಲಿ ಅವುಗಳನ್ನು ಸರಿಪಡಿಸಿ ಕಾರ್ಯದರ್ಶಿಯವರ ಗಮನಕ್ಕೆ ತರಬೇಕೆಂದು ತಿಳಿಸಲಾಗಿದೆ.
4. ಯಾವುದೇ ಮಾದರಿ ಉತ್ತರಗಳು ಬಂದಿರದ ಪಕ್ಷದಲ್ಲಿ ಸಂಬಂಧಿಸಿದ ಪ್ರಶ್ನೆ ಪತ್ರಿಕೆ ರಚನಾಕಾರರಿಂದ ತುರ್ತಾಗಿ ತರಿಸಲು ಸೂಚಿಸಲಾಗಿದೆ.
5. ಪ್ರಶ್ನೆಗಳ ಬಗ್ಗೆ, Out of Syllabus ಮತ್ತು ಇತರೇ ನ್ಯೂನ್ಯತೆಗಳ ದೂರುಗಳು ಬಂದಿರುವ ಪ್ರಶ್ನೆ ಪತ್ರಿಕೆಗಳ ಮಾದರಿ ಉತ್ತರಗಳು-ನಂತರದ ಮೌಲ್ಯಮಾಪನದ ಬಗ್ಗೆ ಪರೀಕ್ಷಕರ ಸಮಿತಿ ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಕುರಿತು ಕಾರ್ಯದರ್ಶಿಯವರ ಗಮನಕ್ಕೆ ತ ರುವುದು.
6. ಪ್ರತಿಯೊಂದು ಬೋರ್ಡಿನ ಎಲ್ಲಾ ಥಿಯರಿ ವಿಷಯಗಳ Scheme of Valuation & Model Answer ಗಳಿಗೆ ಸಂಬಂಧಿಸಿದಂತೆ, ಆಯಾ ಛೇರ್ಮನ್ ಮತ್ತು ಎಲ್ಲಾ ಸದಸ್ಯರು ಸಾಧಕ ಭಾದಕಗಳ ಬಗ್ಗೆ ಪರಸ್ಪರ ಚರ್ಚಿಸಿ (Work From Home Concept ಅಡಿಯಲ್ಲಿ E-mail/ಮೊಬೈಲ್ ಮೂಲಕ ಸಂವಹನ ನಡೆಸಿ), ಸಹಮತದೊಂದಿಗೆ Scheme of Valuation & Model Answer ಗಳನ್ನು ಪರಿಶೀಲಿಸಿ,ನಿರ್ಧರಿಸಿ ಮೇಲು ಸಹಿ ಮಾಡುವುದು.
7. ಯಾವುದೇ ಕಾರಣಕ್ಕೂ, Scheme of Valuation & Model Answer ಗಳ ಸಲುವಾಗಿ ಮೌಲ್ಯಮಾಪನ ಕಾರ್ಯದಲ್ಲಿ ಗೊಂದಲ/ವಿಳಂಬವಾಗದಂತೆ, ಸಂಬಂಧಪಟ್ಟ ಛೇರ್ಮನ್ ಮತ್ತು ಸದಸ್ಯರು ನಿಗಾವಹಿಸತಕ್ಕದ್ದು.
8. Scheme of Valuation & Model Answer ಗಳಲ್ಲಿ ಯಾವುದೇ ತಪ್ಪು, ಅಸ್ಪಷ್ಟತೆ, ಗೊಂದಲ ಇಲ್ಲದಂತೆ ಕ್ರಮ ವಹಿಸಲು ಮತ್ತೊಮ್ಮೆ ತಿಳಿಸಲಾಗಿದೆ.

ಪ್ರತಿಯೊಂದು ದೃಢೀಕೃತ Scheme of Valuation & Model Answer ಗಳ .pdf ಫೈಲ್‌ಗಳಿಗೆ ಸೂಕ್ತ ರೀತಿಯಲ್ಲಿ File Name ನೀಡಿ (ಉದಾ: Sept2020 Subjet code.pdf) ಉಲ್ಲೇಖ(2) ರ ಜ್ಞಾಪನದಂತೆ ಎಲ್ಲಾ 15 ವಿಕೇಂದ್ರಿಕೃತ ನೋಡಲ್ ಮೌಲ್ಯಮಾಪನ ಕೇಂದ್ರಗಳಲ್ಲಿನ ಸಂಬಂಧಪಟ್ಟ ವಿಷಯ ಸಮಿತಿ ಮೇಲ್ವಿಚಾರಕರುಗಳಿಗೆ E-mail ಮೂಲಕ ಕಳುಹಿಸಿಕೊಡಲು ತಿಳಿಸಲಾಗಿದೆ. ಪ್ರತಿ ವಿಷಯದ Scheme of Valuation & Model Answer ಗಳ **.pdf** ಪ್ರತಿಯನ್ನು ತಾಂತ್ರಿಕ ಪರೀಕ್ಷಾ ಮಂಡಳಿಯ E-mail ವಿಳಾಸ btemodelanswer@gmail.com ಗೆ ಸಹ ರವಾನಿಸಲು ತಿಳಿಸಲಾಗಿದೆ.

21/09/2020.

ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ

ಇವರಿಗೆ : ವಿವಿಧ ಪರೀಕ್ಷಕರ ಸಮಿತಿಗಳ ಅಧ್ಯಕ್ಷರು/ಸದಸ್ಯರುಗಳಿಗೆ – ಮುಂದಿನ ಕ್ರಮಕ್ಕಾಗಿ

ಪ್ರತಿ:

1. 15 ನೋಡಲ್ ಕೇಂದ್ರಗಳ ನೋಡಲ್ ಅಧಿಕಾರಿಗಳು/ಶಿಬಿರಾಧಿಕಾರಿಗಳು/ ವಿಷಯ ಸಮಿತಿಗಳ ಮೇಲ್ವಿಚಾರಕರುಗಳಿಗೆ – ಮುಂದಿನ ಕ್ರಮಕ್ಕಾಗಿ
2. ಇ-ಆಡಳಿತ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
3. ಮಾನ್ಯ ಆಯುಕ್ತರ ಆಪ್ತಶಾಖೆ – ಮಾಹಿತಿಗಾಗಿ
4. ಮಾನ್ಯ ನಿರ್ದೇಶಕರ ಆಪ್ತಶಾಖೆ – ಮಾಹಿತಿಗಾಗಿ
5. ಕಾರ್ಯದರ್ಶಿಯವರ ಆಪ್ತಶಾಖೆ